ಕಥೆ

# ಸ್ಯಾಮ್ ತಾರಾ ಮದುವೆ



**ಸಿಡ್ನಿ ಶ್ರೀನಿವಾಸ್**
ಕಲೆ: ವೆಂಕಟ್ರಮಣ ಭಟ್

"ಸ್ಯಾಮ್,

ನೀನು ಮದುವೆಯಾಗುತ್ತಿರುವುದು ಬಹಳ ಸಂತೋಷದ ವಿಷಯ. ನನಗೂ ಭಾಗವಹಿಸುವ ಆಸೆ. ಆದರೆ, ನಿನಗೆ ಚೆನ್ನಾಗಿಯೇ ಗೊತ್ತು. ನಿನ್ನ ತಾಯಿ ಇರುವ ಕಡೆ ನಾನು ಬರಲಾರೆ. ಕ್ಷಮಿಸು. ನೀನೊಂದು ಕೆಲಸ ಮಾಡಬಹುದು. ಮುಂದೆ ಯಾವಾಗಲಾದರೂ ತಾರಾಳನ್ನು ಕರೆದುಕೊಂಡು ಇಲ್ಲಿಗೆ ಒಂದೆರಡು ದಿನದ ಮಟ್ಟಿಗೆ ಬಾ. ಒಟ್ಟಿಗೆ ಕಾಲ ಕಳೆಯಬಹುದು. ಮದುವೆ ಚೆನ್ನಾಗಿ ನೆರವೇರಲಿ ಎಂದು ಹಾರೈಸುತ್ತೇನೆ.

ನಿನ್ನ ಪ್ರೀತಿಯ

ಡ್ಯಾಡಿ"

ಸ್ಯಾಮ್ಯುಯೆಲ್ ಸ್ಕಾಟ್ ತನ್ನ ತಂದೆ ಕಳುಹಿಸಿದ ಇ–ಮೇಲ್ ನೋಡಿ, "ಇಷ್ಟೇ ಇವನ ಯೋಗ್ಯತೆ!" ಎಂದು ಮೂದಲಿಸಿದ. ಹಿನ್ನೆಲೆ ಇಷ್ಟೆ. ಸ್ಯಾಮ್ ತಾನು ಬಹಳ ಇಷ್ಟ ಪಟ್ಟಿದ್ದ ಭಾರತೀಯ ಹುಡುಗಿ ತಾರಾಳನ್ನು ಇನ್ನೊಂದು ತಿಂಗಳಲ್ಲಿ ಮದುವೆಯಾಗುವವನಿದ್ದ. ತನ್ನ ತಂದೆಗೆ ಬರುವಂತೆ ಆಹ್ವಾನ ನೀಡಿದ್ದ. ಬಂದ ಉತ್ತರ ಇದು.

ಸ್ಯಾಮನಿಗೆ ಸದಾ ಒಂದು ಚಿಂತೆ – "ಏನಿದು ನಾವು ಪ್ರಾಣಿಗಳಂತೆ ಆಡುತ್ತೇವೆ. ನಮ್ಮ ಕುಟುಂಬದಲ್ಲಿ ನಾವು ಸಂಬಂಧಿಗಳಂತೆ ವರ್ತಿಸುವುದೇ ಇಲ್ಲವಲ್ಲಾ!" ಅವನ ತಂದೆ ಸ್ಟೀವನ್ ಸ್ಕಾಟ್, ಕಾಲೇಜಿನಲ್ಲಿ ಪ್ರೊಫೆಸರ್ ಮತ್ತು ತಾಯಿ, ಬೆಲಿಂಡಾ ಬ್ಯಾಂಕಿನಲ್ಲಿ ಗುಮಾಸ್ತೆ. ಮದುವೆಯಾಗಿ ಹನ್ನೆರಡು ವರ್ಷ ಒಟ್ಟಿಗೆ ಇದ್ದರು. ಆ ಸಮಯದಲ್ಲಿಯೇ ಇವನು ಹುಟ್ಟಿದ್ದು. ಆದರೆ, ಅಪ್ಪ ಅಮ್ಮ ಇಬ್ಬರ ನಡುವೆ ದಿನವೂ ಕದನ. ಇವನಿಗೆ ಇನ್ನೂ ಹತ್ತು ವರ್ಷ, ತಂದೆ ತನ್ನ ಸಹೋದ್ಯೋಗಿಯನ್ನು ಪ್ರೇಮಿಸಿದ. ಹೆಂಡತಿ ಬೆಲಿಂಡಾಳನ್ನು ಬಿಟ್ಟ. ವಿಚ್ಛೇದನದ ಸಮಯದಲ್ಲಿ ಆಸ್ತಿಗಾಗಿ ಹೋರಾಟ – ತಂದೆ ತಾನು ಸಂಪಾದಿಸಿದ್ದ ಹಣವನ್ನು ಉಳಿಸಿಕೊಳ್ಳಲು. ತಾಯಿ, ಮಗನ ಮತ್ತು ತನ್ನ ಹಿತದೃಷ್ಟಿಯಿಂದ ಅವನಿಂದ ಆದಷ್ಟು ಹಣವನ್ನು ಕಸಿದುಕೊಳ್ಳಲು. ಕೋರ್ಟಿನಲ್ಲಿ ಲಾಯರುಗಳು ಕಿತ್ತಾಡಿದ್ದರು. ಕೊನೆಗೆ ತಂದೆಯ ಗಳಿಕೆಯ ಬಹು ಭಾಗ ತಾಯಿಯ ಪಾಲಾಯಿತು. ತಂದೆ ಸ್ಟೀವನ್ ಸಿಡ್ನಿಯನ್ನು ಬಿಟ್ಟು ಅಡಿಲೇಡಿಗೆ ಹೋಗಿ ಅಲ್ಲಿ ತನ್ನ ಪ್ರೇಯಸಿಯನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದ. ಅವನ

